RNU AIR DHARWAD

OCTOBER 14, 2025

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಕೇಂದ್ರ ಹಣಕಾಸು ಖಾತೆ** ಸಚಿವರಾದ ನಿರ್ಮಲಾ ಸೀತಾರಾಮನ್, ಇಂದಿನಿಂದ ನಾಲ್ಕು ದಿನ, ರಾಜ್ಯಕ್ಕೆ ಭೇಟಿ ನೀಡಲಿದ್ದು, ಹಲವು ವಿಶೇಷ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ಇಂದು ಸಂಜೆ 5.30ಕ್ಕೆ,** ಭಾರತೀಯ ತಂತ್ರಜ್ಞಾನ ಸಂಸ್ಥೆ, ಧಾರವಾಡದ, ಬಯೋನೆಸ್ಟ್ ಇನ್‌ಕ್ಯುಬೇ ’ನ್ ಸೆಂಟರ್ ಉದ್ಘಾಟಿಸಿ, ಐ.ಐ.ಟಿ. ವಿದ್ಯಾರ್ಥಿಗಳೊಂದಿಗೆ, ಸಚಿವರು ಸಂವಾದ ನಡೆಸಲಿದ್ದಾರೆ.

<><><>

**ನಾಲ್ಕು ದಿನಗಳ ರಾಜ್ಯ ಭೇಟಿಯಲ್ಲಿ** ನಿರ್ಮಲಾ ಸೀತಾರಾಮನ್, ಕೊಪ್ಪಳ, ರಾಯಚೂರು, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ, ರೈತ ತರಬೇತಿ ಕೇಂದ್ರಗಳು ಹಾಗೂ ಕೃಷಿ ಸಂಸ್ಕರಣಾ ಘಟಕಗಳನ್ನು ಉದ್ಘಾಟಿಸಲಿದ್ದಾರೆ.

<><><>

**ಹಂಪಿಯ ವಿರೂಪಾಕ್ಷ ದೇವಾಲಯ** ಹಾಗೂ ಬಳ್ಳಾರಿ ಜಿಲ್ಲೆ, ಸಿರಗುಪ್ಪ ತಾಲೂಕು, ಬಾಗೇವಾಡಿ ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ಭೇಟಿ ನೀಡಲಿದ್ದಾರೆ.

<><><>

**ಕೊಪ್ಪಳ ಜಿಲ್ಲೆ, ಮೆತಗಲ್ಲ ಗ್ರಾಮದಲ್ಲಿ,** ಹಣ್ಣುಗಳ ಸಂಸ್ಕರಣಾ ಘಟಕ, ನಾಳೆ ಸಚಿವರಿಂದ ಉದ್ಘಾಟನೆಯಾಗಲಿದೆ ಎಂದು, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೃ ್ಣ ವುಕ್ಕುಂದ ತಿಳಿಸಿದ್ದಾರೆ

<><><>

**‘ಉತ್ತಮ ವಿಶ್ವಕ್ಕಾಗಿ, ಹಂಚಿಕೊಳ್ಳೋಣ:** ಸುಸ್ಥಿರ ಅಭ್ಯುದಯಕ್ಕಾಗಿ, ಗಮನ ಸೆಳೆದು, ಗುರಿ ಸಾಧನೆಗಾಗಿ ಪಾಲುದಾರರಾಗೋಣ’ ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಮಾನಕಗಳ ದಿನಾಚರಣೆ. ಕೈಗಾರಿಕೆ, ಸಂಸ್ಥೆ ಹಾಗೂ ಆಡಳಿತದ ನಡುವೆ, ಖಾಸಗಿ ಸಹಭಾಗಿತ್ವ ಮತ್ತು ಪಾಲುದಾರಿಕೆಯನ್ನು ಉತ್ತೇಜಿಸಲು, ಈ ದಿನ ಮೀಸಲಿದೆ.

<><><>

**ಹೊಸ ದಿಲ್ಲಿಯ, ನ್ಯಾಷನಲ್ ಇನ್ಸ್ಟಿಟ್ಯೂಟ್** ಆಫ್ ಟ್ರೇನಿಂಗ್ ಫಾರ್ ಸ್ಟ್ಯಾಂಡರ್ಡೈಸೇಷನ್‌ನಲ್ಲಿ ಇಂದು ಬೆಳಗ್ಗೆ ಆಯೋಜಿತ ಕಾರ್ಯಕ್ರಮದಲ್ಲಿ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಪಾಲ್ಗೊಂಡರು.

<><><>

**ಮಹಿಳಾ ಉದ್ಯೋಗಿಗಳಿಗೆ,** ಪ್ರತಿ ತಿಂಗಳು ಒಂದು ದಿನದ, ವೇತನ ಸಹಿತ ಮುಟ್ಟಿನ ರಜೆ ನೀಡುವುದನ್ನು, ಜಾರಿಗೊಳಿಸಲು ನಿಯಮ ರೂಪಿಸಲಾಗುವುದು; ಹೊಸ ನೀತಿ ಜಾರಿ ಸಂಬಂಧ, ಮಸೂದೆ ಅಥವಾ ಸುಗ್ರೀವಾಜ್ಞೆ ಹೊರಡಿಸಲಾಗುವುದು ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ.

<><><>

**ಸ್ವಿಟ್ಜರ್‌ಲ್ಯಾಂಡ್ ನ ಜಿನಿವಾದ,** ಬಯೋಟೆಕ್ ಕ್ಯಾಂಪಸ್‌ನಲ್ಲಿ ಜರುಗಿದ, ‘ಸ್ವಿಸ್‌ನೆಕ್ಸ್ ಕ್ವಾಂಟಮ್ ಸಮಿಟ್ 2025’ ನಲ್ಲಿ, ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ, ಅರಿಂದಮ್ ಘೋಷ್ ಪಾಲ್ಗೊಂಡಿದ್ದರು. ಬೆಂಗಳೂರನ್ನು ಕ್ವಾಂಟಮ್ ರಾಜಧಾನಿಯನ್ನಾಗಿಸುವ ನಿಟ್ಟಿನಲ್ಲಿ, ಬೆಂಗಳೂರಿನಲ್ಲಿ ಅಭಿವೃದ್ಧಿ ಪಡಿಸಲಿರುವ, ಕ್ವಾಂಟಮ್ ತಂತ್ರಜ್ಞಾನ ಕ್ಯಾಂಪಸ್ ಪರಿಚಯಿಸುವ, ‘ಕ್ಯೂ–ಸಿಟಿ – ಫೇಸ್ ಒನ್’ ಯೋಜನೆಯ, ಪರಿಕಲ್ಪನೆ ವಿಡಿಯೊ, ಅನಾವರಣಗೊಂಡಿತು.

<><><>

**ಗ್ರಾಮೀಣ ಪ್ರದೇಶಗಳಲ್ಲಿ ಹಿಂದೆ ಲಭ್ಯವಿದ್ದ,** ಜಲಮೂಲಗಳನ್ನು ಪತ್ತೆ ಮಾಡಿ, ಪುನರುಜ್ಜೀವಿತ ಗೊಳಿಸುವ ಸಾಧ್ಯತೆ ಅನುಲಕ್ಷಿಸಿ, ಕುಡಿಯುವ ನೀರಿನ ಕೊರತೆ ನೀಗಿಸಲು, ಪಂಚಾಯಿತಿ ರಾಜ್ ಇಲಾಖೆ, ಯೋಜಿಸಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಅವರೊಂದಿಗೆ, ಗ್ರಾಮೀಣ ನೀರು ಸರಬರಾಜು ಇಲಾಖೆಗೆ ಸಂಬಂಧಿಸಿ, ಸಮಾಲೋಚನೆ ನಡೆಸಿ, ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾಗಿ ಹೇಳಿದ್ದಾರೆ.

<><><>

**ಬೆಂಗಳೂರಿನ ಸಂತಕವಿ ಕನಕದಾಸ** ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ನೀಡುವ, 2025–26ನೇ ಸಾಲಿನ, ಕನಕ ಗೌರವ ಪುರಸ್ಕಾರಕ್ಕೆ, ಮೈಸೂರಿನ ಅಕ್ಕಮಹಾದೇವಿ ಹಾಗೂ ಕನಕ ಯುವ ಪುರಸ್ಕಾರಕ್ಕೆ, ಬೀದರ ಜಿಲ್ಲೆ, ಭಾಲ್ಕಿ ತಾಲೂಕು ಲಂಜವಾಡದ, ರವೀಂದ್ರ ಲಂಜವಾಡಕರ ಭಾಜನರಾಗಿದ್ದಾರೆ. ಭಪುರಸ್ಕಾರಗಳು, ಕ್ರಮವಾಗಿ ತಲಾ 75 ಸಾವಿರ ಹಾಗೂ 50 ಸಾವಿರ ರೂಪಾಯಿ ನಗದು, ಸ್ಮರಣಿಕೆ ಹಾಗೂ ಪ್ರಮಾಣಪತ್ರವನ್ನು ಒಳಗೊಂಡಿದೆ.

<><><>

**‘ವಿಶೇಷ ಆಂದೋಲನ 5.ಓ’ ಅಡಿ**, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಹೆದ್ದಾರಿ ಪಕ್ಕದ ಶೌಚಾಲಯಗಳ ನೈರ್ಮಲ್ಯ, ಶುಚಿತ್ವ ಹಾಗೂ ಸ್ವಚ್ಛತೆ, ಖಾತ್ರಿ ಪಡಿಸಲು, ಚಿತ್ರಗಳ ಸಮೇತ, ಪ್ರಯಾಣಿಕರು ತಮ್ಮ ವಿವರಗಳನ್ನು, ರಾಜಮಾರ್ಗ ಯಾತ್ರೆ ಆಪ್‌ನಲ್ಲಿ, ದಾಖಲಿಸುವಂತೆ, ಕೇಂದ್ರ ಹೆದ್ದಾರಿ ಸಚಿವಾಲಯ ಕೋರಿದೆ.

<><><>

**ಬರುವ ನವೆಂಬರ್ 1 ರಿಂದ, 30ರ ವರೆಗೆ**, ಕೇಂದ್ರ ಪಿಂಚಣಿ ಮತ್ತು ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ, ಜೀವಿತ ಪ್ರಮಾಣ ಪತ್ರ, ಡಿಜಿಟಲ್ ಲೈಫ್ ಸರ್ಟಿಫಿಕೇಟ್, ಸಲ್ಲಿಕೆ ಆಂದೋಲನ ದೇಶಾದ್ಯಂತ ಆಯೋಜಿಸಲಿದೆ.

<><><>

**ಧಾರವಾಡ ರಂಗಾಯಣ ನಿರ್ದೇಶಕ**, ರಾಜು ತಾಳಿಕೋಟೆ, ಅವರ ಪಾರ್ಥಿವ ಶರೀರಕ್ಕೆ, ಧಾರವಾಡ ರಂಗಾಯಣದ ಸುವರ್ಣ ಸಾಂಸ್ಕೃತಿಕ ಸಮುಚ್ಛಯ ಆವರಣದಲ್ಲಿ, ಜಿಲ್ಲಾಧಿಕಾರಿ ದಿವ್ಯಾ ಪ್ರಭು ಸೇರಿದಂತೆ, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ಕಲಾವಿದರು ಗೌರವ ಸಲ್ಲಿಸಿದರು. ಅಂತ್ಯಕ್ರಿಯೆ ಇಂದು ಸಂಜೆ, ವಿಜಯಪುರ ಜಿಲ್ಲೆ, ಸಿಂದಗಿ ತಾಲೂಕು, ಚಿಕ್ಕಸಿಂದಗಿಯಲ್ಲಿ ಜರುಗಲಿದೆ. ಗಣ್ಯರು, ಹಿರಿಯ ಕಲಾವಿದರು ಕಂಬನಿ ಮಿಡಿದಿದ್ದಾರೆ.

<><><>

**ಆಕಾಶವಾಣಿ ಭದ್ರಾವತಿ ಕೇಂದ್ರ**, ನವೆಂಬರ್ 1 ಕನ್ನಡ ರಾಜ್ಯೋತ್ಸವದ ಹಿನ್ನೆಲೆ, **‘ಕಾರ್ಡಿನಲ್ಲಿ ಕಥೆ’** ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಿದೆ. ಆಕಾಶವಾಣಿ ಕೇಳುಗರು, ಅಂಚೆ ಕಾರ್ಡಿನಲ್ಲಿ ಕಥೆಯನ್ನು ಬರೆದು, ಈ ತಿಂಗಳ 31 ರ ಒಳಗಾಗಿ ಕೇಂದ್ರಕ್ಕೆ ಕಳುಹಿಸುವಂತೆ, ಕೋರಲಾಗಿದೆ. ಆಯ್ದ ಕಥೆಗಳನ್ನು, ನವೆಂಬರ್ ತಿಂಗಳಲ್ಲಿ ಪ್ರಸಾರ ಮಾಡಲಾಗುತ್ತದೆ ಎಂದು, ಕಾರ್ಯಕ್ರಮ ಮುಖ್ಯಸ್ಥರು ತಿಳಿಸಿದ್ದಾರೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**